<u>ಕರ್ನಾಟಕ ಸರ್ಕಾರ</u>

<u>ವಾಣಿಜ್ಯ ತೆರಿಗೆಗಳ ಇಲಾಖೆ.</u>

<u>ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ಧಾರವಾಡ ಇವರ ಕಚೇರಿ</u>

<u>ಟೆಂಡರ ಕಂ ಬಹಿರಂಗ ಹರಾಜು ಪ್ರಕಟಣೆ</u>

<u>ನಂ: ವಾತೆಜಂಆ(ಆ)ವ್ಯಾಟ/ಧಾ/ಇತರೆ/2011-12/ದಿನಾಂಕ: 2-5-2011.</u>

ವಿಷಯ: ಅನುಪಯುಕ್ತ ವಾಹನ ಅಂಬ್ಯಾಸಿಡರ ಕಾರು ಕೆಎ-25/ಜಿ-32ನ್ನು ಟೆಂಡರ ಕಂ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1)ಮಾನ್ಯ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು, ಇವರ ಆದೇಶ ಸಂ: ವಿಹೆಚ್‌ಟಿ/ಸಿಆರ್-12/09-10/ದಿನಾಂಕ: 16-04-2009.

2)ಜಿಲ್ಲಾಧಿಕಾರಿಗಳು, ಧಾರವಾಡ ಇವರ ಪತ್ರ ಸಂ: ಎಡಿಎಂ/ನಿರುಪಯುಕ್ತ ವಾಹನ/ವಹಿ-1/10-11/ದಿನಾಂಕ: 8-12-2010.

3)ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಧಾರವಾಡ ಇವರ ಪತ್ರ ಸಂ: ಪ್ರಾ.ಸಾ.ಅ/ಧಾ/ಸಿಬ್ಬಂದಿ/ವಾಹನ ಮೌಲ್ಯ/10-11/ದಿನಾಂಕ: 26-02-2011.

-00-

ಸಾರ್ವಜನಿಕರಿಗೆ ಮಾಹಿತಿಗಾಗಿ ಈ ಮೂಲಕ ತಿಳಿಸುವುದೇನೆಂದರೆ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ ಕಾರ್ಯಾಲಯ, ಧಾರವಾಡ ಇವರ ವಾಹನ ಅಂಬ್ಯಾಸಿಡರ ಕಾರು ಕೆಎ-25/ಜಿ-32 ಇರುವ ಯಥಾ ಸ್ಥಿತಿಯಲ್ಲಿಯೇ ದಿನಾಂಕ: 27-5-2011 ಮುಂಜಾನೆ 11-45ಗಂಟೆಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರಿಂದ ಬಹಿರಂಗ ಹರಾಜು ಹಾಗೂ ಮೊಹರ ಬಂದ ಟೆಂಡರ ಮೂಲಕ ವಿಲೇವಾರಿ (ಮಾರಾಟ)ಮಾಡಲಾಗುವುದು.

| ಕ್ರಮ ಸಂಖ್ಯೆ. | ವಾಹನದ ವಿಧ ಹಾಗೂ ವಾಹನದ ಸಂಖ್ಯೆ. | ವಾಹನವಿರುವ ಸ್ಥಳ. |
|---|---|---|
| 1 | ಪೆಟ್ರೋಲ ಅಂಬ್ಯಾಸಿಡರ ಕಾರು ಕೆಎ-25/ಜಿ-32 | "ತೆರಿಗೆ ಭವನ" ನೆಲಮಹಡಿ, ಡಿ.ಸಿ.ಕಂಪೌಂಡ, ಧಾರವಾಡ. |

ಹರಾಜಿನ ನಿಬಂಧನೆಗಳು:-

1)ನಿರುಪಯುಕ್ತ ವಾಹನವನ್ನು ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು.

2)ಮೇಲೆ ತಿಳಿಸಿರುವ ಅನುಪಯುಕ್ತ ವಾಹನವನ್ನು ಸಾರ್ವಜನಿಕ ಹರಾಜು ಹಾಗೂ ಮೋಹರ ಬಂದ ಟೆಂಡರ ಮೂಲಕ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಸಮ್ಮುಖದಲ್ಲಿ ನಡೆಸಲಾಗುವುದು.

3)ಗುಪ್ತ ಮೊಹರಾದ ಟೆಂಡರ ಫಾರ್ಮಗಳ ನಮೂನೆಯನ್ನು ಈ ಪ್ರಕಟಣೆಯ ಹಿಂಬದಿಯಲ್ಲಿ ನಮೂದಿಸಿದೆ.

4)ಟೆಂಡರ ಫಾರ್ಮನಲ್ಲಿ ದರವನ್ನು ಅಕ್ಷರಗಳಲ್ಲಿ ಮತ್ತು ಅಂಕಿಗಳಲ್ಲಿ ಸ್ಪಷ್ಟವಾಗಿ ನಮೂದಿಸಿರತಕ್ಕದ್ದು.

5)ಗುಪ್ತ ಮೊಹರಾದ ಟೆಂಡರಗಳನ್ನು ಈ ಕಚೇರಿಗೆ ದಿನಾಂಕ:25-5-2011 ರಂದು ಸಂಜೆ 5-00 ಗಂಟೆಯ ಒಳಗೆ ತಲುಪಿಸತಕ್ಕದ್ದು. ಮೊಹರ ಬಂದ ಲಕೋಟೆಯ ಮೇಲೆ "ನಿರುಪಯುಕ್ತ ಅಂಬ್ಯಾಸಿಡರ ಕಾರು ಖರೀದಿಸುವ ಬಗ್ಗೆ ಟೆಂಡರ" ಅಂತಾ ಬರೆಯತಕ್ಕದ್ದು, ಅಂಚೆದಾರರ ವಿಳಂಬಕ್ಕೆ ಅಧಿಕಾರಿಗಳು ಜವಾಬ್ದಾರರಲ್ಲ.

6)ಗುಪ್ತ ಮೊಹರ ಟೆಂಡರ ಫಾರ್ಮಗಳ ಲಕೋಟೆಯನ್ನು ಬಹಿರಂಗ ಹರಾಜು ಮುಗಿದ ಕೂಡಲೇ ಬಿಡ್ಡುದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

7)ಬಹಿರಂಗ ಹರಾಜನ್ನು ದಿನಾಂಕ: 27-5-2011 ರಂದು ಬೆಳಿಗ್ಗೆ 11-45 ಗಂಟೆಗೆ ಈ ಕಚೇರಿಯ ಆವರಣದಲ್ಲಿ ಜರುಗಿಸಲಾಗುವುದು.

8)ಗುಪ್ತ ಟೆಂಡರ ಮೂಲಕ ವಾಹನವನ್ನು ಖರೀದಿಸಲು ಇಚ್ಛೆಯುಳ್ಳವರು ಮೊಹರಬಂದ ಟೆಂಡರನೊಡನೆ ರೂ. 5000/-ಗಳ ಠೇವಣಿ ಹಣವನ್ನು ಡಿ.ಡಿ. ರೂಪದಲ್ಲಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ಧಾರವಾಡ ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು. ಡಿ.ಡಿ. ಲಗತ್ತಿಸದೇ ಇರುವ ಅರ್ಜಿಗಳನ್ನು ಟೆಂಡರ ಪ್ರಕ್ರಿಯೆಯಲ್ಲಿ ಸೇರಿಸುವುದಿಲ್ಲ.

9)ಬಹಿರಂಗ ಹರಾಜಿನಲ್ಲಿ ನೇರವಾಗಿ ಭಾಗವಹಿಸುವವರು ಠೇವಣಿ ಹಣ ರೂ. 5000/- (ರೂ. ಐದು ಸಾವಿರ ಮಾತ್ರ) ಹರಾಜಿನಲ್ಲಿ ಭಾಗವಹಿಸುವ ಮುನ್ನ ಕಚೇರಿಯಲ್ಲಿ ನಗದು ಪಾವತಿಸಿ ರಶೀದಿ ಪಡೆಯತಕ್ಕದ್ದು. ಹರಾಜು ಪ್ರಾರಂಭವಾದ ನಂತರ ಸವಾಲುದಾರರಿಂದ ಠೇವಣಿ ಹಣ ಪಡೆಯಲಾಗುವುದಿಲ್ಲ.

10)ಠೇವಣಿ ತುಂಬಿದ ಸವಾಲುದಾರರು ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರಿಗೆ ಠೇವಣಿ ಹಣ ನಗದು ರೂಪದಲ್ಲಿ ಮಾತ್ರ ಸ್ವೀಕರಿಸಲಾಗುತ್ತದೆ.

11)ಬಹಿರಂಗ ಹರಾಜಿನಲ್ಲಿ ಅತೀ ಹೆಚ್ಚಿನ ಬಿಡ್ ದರವನ್ನು ದಾಖಲಿಸಿಕೊಳ್ಳಲಾಗುವುದು.

12)ಅತೀ ಹೆಚ್ಚಿನ ದರವನ್ನು ಬಹಿರಂಗ ಹರಾಜಿನಲ್ಲಿ ಕೂಗಲ್ಪಟ್ಟ ಅಭ್ಯರ್ಥಿಯು ಸ್ಥಳದಲ್ಲಿಯೇ ಹರಾಜಿನ ಶೇ. 25ರ ಭಾಗದ ಹಣವನ್ನು ಪಾವತಿಸಬೇಕಾಗಿರುತ್ತದೆ. ಮತ್ತು ಅತೀ ಹೆಚ್ಚು ಹರಾಜು ಕೂಗಿದ ಮೊತ್ತವನ್ನು ಮಾನ್ಯ ಆಯುಕ್ತರ ಗಮನಕ್ಕೆ ತಂದು ಅವರಿಂದ ಅನುಮತಿ ಸ್ಥಿರೀಕರಣ ಪತ್ರ ಪಡೆದು ನಂತರ ವಾಹನ ಹಸ್ತಾಂತರಿಸಲಾಗುವುದು.

13)ಹರಾಜಿನ ಪೂರ್ಣ ಮೊತ್ತವನ್ನು ಬಿಡ್ಡದಾರರಿಂದ ಪಡೆದು ಸರ್ಕಾರಕ್ಕೆ ಜಮೆ ಮಾಡಿದ ನಂತರವೇ ವಾಹನ ಹಸ್ತಾಂತರಿಸಲಾಗುವುದು ಹಾಗೂ ತಮ್ಮ ಸ್ವಂತ ಖರ್ಚಿನಲ್ಲಿಯೇ ವಾಹನವಿರುವ ಸ್ಥಳದಿಂದ ಸಾಗಿಸಿಕೊಳ್ಳತಕ್ಕದ್ದು.

14)ಬಹಿರಂಗ ಹರಾಜಿನಲ್ಲಿ ಕೂಗಬಹುದಾದ ಮೊತ್ತ ಅಥವಾ ಗುಪ್ತ ಟೆಂಡರಿನಲ್ಲಿ ನಮೂದಿಸಿರುವ ಮೊತ್ತ ಇವೆರಡರಲ್ಲಿ ಯಾವುದು ಅಧಿಕವೋ ಅದನ್ನು ಮಾತ್ರ ಅಂಗೀಕರಿಸಲಾಗುವುದು.

15)ವಾಹನವನ್ನು ಪರೀಕ್ಷಿಸಲಿಚ್ಛಿಸುವವರು ಈ ಕಚೇರಿ ಆವರಣದಲ್ಲಿ ಬೆಳಿಗ್ಗೆ 11-00 ಗಂಟೆಯಿಂದ ಸಂಜೆ 5-00 ಗಂಟೆಯೊಳಗೆ (ಸರ್ಕಾರಿ ಕೆಲಸದ ದಿನಗಳಂದು) ವೀಕ್ಷಿಸಬಹುದು.

16)ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ರೂ. 5000/- ಕಟ್ಟಿ ಹರಾಜಿನಲ್ಲಿ ಯಶಸ್ವಿಯಾಗದವರಿಗೆ ಕಟ್ಟಿದ ಹಣವನ್ನು ಕೂಡಲೇ ಹಿಂದಿರುಗಿಸಲಾಗುವುದು.

17)ಬಹಿರಂಗ ಹರಾಜು ಮುಗಿದನಂತರ "ಮೊಹರ ಬಂದ ಟೆಂಡರ ಲಕೋಟೆಯನ್ನು" ತೆರೆಯಲಾಗುವುದು. ಈ ರೀತಿ ಹೆಚ್ಚಿಗೆ ನಮೂದಿಸಿರುವವರು ಅಥವಾ ಬಹಿರಂಗ ಹರಾಜಿನಲ್ಲಿ ಹೆಚ್ಚಿಗೆ ಬಿಡ್ಡುದಾರರಾದ ಪಕ್ಷದಲ್ಲಿ ಅಂಥವರು ಕೂಡಲೇ ಹರಾಜಿನ ಶೇ. 25 ರಷ್ಟು ಹಣವನ್ನು ಪಾವತಿ ಮಾಡದಿದ್ದ ಪಕ್ಷದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

18)ಹರಾಜಿನ ಗುಪ್ತ ಟೆಂಡರಿನ ಉಳಿದ ಶೇ. 75 ರಷ್ಟು ಹಣವನ್ನು ಮಾನ್ಯ ಆಯುಕ್ತರ ಒಪ್ಪಿಗೆ ಪತ್ರ ದೊರೆತ 20 ದಿನಗಳೊಳಗೆ ಪೂರ್ತಿ ಪಾವತಿಸತಕ್ಕದ್ದು.

19)ಹರಾಜಿನ/ಗುಪ್ತ ಟೆಂಡರಿನ ಹಣದ ಮೇಲೆ ಶೇ. 14 ರಷ್ಟು ಮಾರಾಟ ತೆರಿಗೆ (ವ್ಯಾಟ) ಪಾವತಿಸತಕ್ಕದ್ದು.

20)ಹರಾಜಿನ ಗುಪ್ತ ಟೆಂಡರ ಪ್ರಕಾರ ತೆಗೆದುಕೊಂಡ ವಾಹನವನ್ನು ಈ ಕಾರ್ಯಾಲಯದಿಂದ ಪತ್ರ ಕಳುಹಿಸಿದ 20 ದಿನಗಳೊಳಗಾಗಿ ಪೂರ್ಣ ಹಣ ಸರ್ಕಾರಕ್ಕೆ ಪಾವತಿಸಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಪ್ರತಿದಿನಕ್ಕೆ ರೂ. 25-00 ರಂತೆ ನೆಲಬಾಡಿಗೆ ವಿಧಿಸಲಾಗುವುದು ಮತ್ತು ಒಂದು ತಿಂಗಳೊಳಗಾಗಿ ಪೂರ್ಣಹಣ ಕಟ್ಟದಿದ್ದಲ್ಲಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ವಾಹನವನ್ನು ಮತ್ತೊಮ್ಮೆ ಟೆಂಡರ ಕಂ ಹರಾಜು ಮೂಲಕ ವಿಲೇವಾರಿ ಕ್ರಮ ಜರುಗಿಸಲಾಗುವುದು.

21)ಬಹಿರಂಗ ಹರಾಜಿನಲ್ಲಿ ವಾದವಿವಾದಗಳಿಗೆ ಅವಕಾಶವಿಲ್ಲ. ಹಾಗೂ ಈ ಕೆಳಗೆ ಸಹಿ ಮಾಡಿರುವವರ ತೀರ್ಮಾನವೇ ಅಂತಿಮವಾದದ್ದು. ಈ ವಿವಾದವನ್ನು ಯಾವ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.

22)ಯಾವುದೇ ಸಂದರ್ಭದಲ್ಲಿ ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ /ಮುಂದೂಡುವ /ರದ್ದುಪಡಿಸುವ ಎಲ್ಲಾ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಹೊಂದಿರುತ್ತಾರೆ. ಅವರ ನಿರ್ಣಯವೇ ಅಂತಿಮವಾದದ್ದು.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,
(ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ಧಾರವಾಡ.

---

<u>ಟೆಂಡರ ಫಾರ್ಮ ನಮೂನೆ</u>
<u>(ಅನುಪಯುಕ್ತ ಅಂಬ್ಯಾಸಿಡರ ಕಾರ್ರ ಖರೀದಿ).</u>

1)ಟೆಂಡರದಾರರ ಪೂರ್ತಿ ಹೆಸರು:

2)ಪೂರ್ಣ ವಿಳಾಸ.

3)ಟೆಂಡರ ಹಾಕಿದ ವಾಹನ ಸಂಖ್ಯೆ:

4)ನಿಗದಿತ ಈ.ಎಮ್.ಡಿ. ಹಣ ಡಿ.ಡಿ. ಸಂಖ್ಯೆ, ದಿನಾಂಕ.

5)ಖರೀದಿಸಬಯಸುವ ಗರಿಷ್ಠ ಮೊತ್ತ.
(ಅಂಕಿ ಮತ್ತು ಅಕ್ಷರಗಳಲ್ಲಿ).

ಈ ಹರಾಜು ಪ್ರಕಟಣೆಯ ಎಲ್ಲಾ ನಿಬಂಧನೆಗಳನ್ನು ಅರಿತುಕೊಂಡಿರುತ್ತೇನೆ. ಮತ್ತು ಅವುಗಳಿಗೆ ಬದ್ಧನಾಗಿರುತ್ತೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಟೆಂಡರದಾರನ ಸಹಿ.

# ಕರ್ನಾಟಕ ಸರ್ಕಾರ
## ವಾಣಿಜ್ಯ ತೆರಿಗೆಗಳ ಇಲಾಖೆ
## ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಚೇರಿ (ಆಡಳಿತ) ಮೌಲ್ಯವರ್ಧಿತ ತೆರಿಗೆ ವಿಭಾಗ, ಧಾರವಾಡ.

ನಂ: ವಾತೆಜಂಆ(ಅ)/ಮೌತೆವಿ/ಧಾ/ವಾಹನ/11-12      ದಿನಾಂಕ: 10-05-2011.

## ಟೆಂಡರ ಕಂ ಬಹಿರಂಗ ಹರಾಜು ಪ್ರಕಟಣೆ

ಧಾರವಾಡ ಡಿ.ಸಿ. ಕಂಪೌಂಡಿನಲ್ಲಿರುವ "ತೆರಿಗೆ ಭವನ"ದ ನೆಲಮಹಡಿಯಲ್ಲಿರುವ ಇಲಾಖೆಯ ಅನುಪಯುಕ್ತ ವಾಹನ ಅಂಬ್ಯಸೆಡರ ಕಾರು ನಂ. ಕೆಎ-25/ಜಿ-32ನ್ನು "ಹೇಗಿದೆಯೋ ಹಾಗೇ ಯಥಾ ಸ್ಥಿತಿಯಲ್ಲಿರುವಂತೆ" ಟೆಂಡರ ಕಂ ಬಹಿರಂಗ ಹರಾಜು ಮೂಲಕ ವಿಲೇ ಮಾಡಲು ಅರ್ಹವ್ಯಕ್ತಿಗಳಿಂದ ಮೊಹರಬಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ .

1) ಭರ್ತಿಮಾಡಿದ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:25-05-2011 ಸಂಜೆ 5-00 ಗಂಟೆವರೆಗೆ.
2) ಟೆಂಡರ ತೆರೆಯುವ ದಿನಾಂಕ:27-05-2011. ಬಹಿರಂಗ ಹರಾಜು ಮುಗಿದ ನಂತರ.

ಖಾಲಿ ಟೆಂಡರ ಫಾರ್ಮ ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂ: 2210172, 2210173 ಸಂಪರ್ಕಿಸಬಹುದು. ಹಾಗೂ ವೆಬ್ ಸೈಟ ನಂ http//:ctax.kar.nic.in ನ್ನು ಸಹ ಅವಲೋಕಿಸಬಹುದು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ),
ಮೌಲ್ಯವರ್ಧಿತ ತೆರಿಗೆ ವಿಭಾಗ, ಧಾರವಾಡ.